

ಉಪ್ಪಿನ ಸಂಗ್ರಹಣೆ

ಯುದ್ಧಕ್ಕೆ ಬೇಕಾದ ವಸ್ತುಗಳನ್ನು ಉತ್ಪಾದಿಸುವ ಫ್ಯಾಕ್ಟರಿಯನ್ನು ಶುರುಮಾಡಲು ಯೋಜನೆ ಹಾಕಿದರು.

ಆಗೆಲ್ಲ ಗಣಿಗಳಲ್ಲಿ ಕೆಲಸಮಾಡುವುದು ಸುಲಭದ ಮಾತಾಗಿರಲಿಲ್ಲ. ವೇಲಿಜ್ಕಾ ಉಪ್ಪಿನ ಗಣಿ ಕತ್ತಲೆ, ಒದ್ದೆ, ಲವಣ, ತಲೆ ಮೇಲೆ ಕುಸಿಯುವ ಸೂರು, ತಟ್ಟನೆ ಜರಗುವ ಗೋಡೆಗಳು ಹೀಗೆ ಸದಾ ಆಪತ್ತುಗಳ ತಾಣವಾಗಿತ್ತು. ಪ್ರತಿದಿನ ಸಾವು ನೋವುಗಳಾಗುತ್ತಿದ್ದವು. ಹೀಗಾಗಿ ಗಣಿಗಾರರು ಒಬ್ಬರಿಗೊಬ್ಬರು ಎದುರಾದಾಗ 'ಹಲೋ' ಅಥವಾ 'ಗುಡ್ ಡೇ' (ಶುಭ ದಿನ) ಅನ್ನುವ ಬದಲು 'ಗಾಡ್ ಬ್ಲೆಸ್' (ದೇವರು ರಕ್ಷಿಸಲಿ) ಎಂದು ಹೇಳುತ್ತಿದ್ದರು. ಈ ಕಾರಣ ಜರ್ಮನ್ನರು ತಮ್ಮ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸಹಸ್ರಾರು ಮಂದಿ ಯಹೂದಿ ಸೆರೆಯಾಳುಗಳನ್ನು ಕರೆತಂದರು. ಇದೇ ಸಮಯಕ್ಕೆ ಸರಿಯಾಗಿ ಕ್ರಾಕೊವ್ ನಗರವನ್ನು ವಶಪಡಿಸಿಕೊಂಡಿದ್ದ ಜರ್ಮನ್ನರ ಮೇಲೆ ರಷ್ಯನ್ನರು ಆಕ್ರಮಣ ಮಾಡಿದ ಕಾರಣ ವೇಲಿಜ್ಕ ಗಣಿಯಲ್ಲಿ ಫ್ಯಾಕ್ಟರಿ ಮಾಡುವ ಅವರ ಉದ್ದೇಶ ಫಲಿಸಲಿಲ್ಲ. ಉಪ್ಪಿನ ಉತ್ಪಾದನೆ ಅಲ್ಪ ಕಾಲ ನಿಂತೇ ಹೋಯ್ತಾದರೂ ವೇಲಿಜ್ಕಾ ಸುಧಾರಿಸಿಕೊಂಡು ಉಪ್ಪಿನ ಗಣಿಯಾಗಿಯೇ ಮುಂದುವರೆಯಿತು. ಹತ್ತಾರು ತಲೆಮಾರುಗಳಿಗೆ ಕೆಲಸ ನೀಡುತ್ತ ಅನ್ನದಾತೆಯಾದ ಈ ಗಣಿಯಲ್ಲಿ 700 ವರ್ಷಗಳ ಕಾಲ ಕೆಲಸ ನಿರಂತರವಾಗಿ ನಡೆಯಿತು.

ಕೆಲಸದ ನಡುವೆ ಕರಕುಶಲ ಕಲೆಯಲ್ಲಿ ನುರಿತ ಕೆಲಸಗಾರರು, ದೇವರು, ರಾಜರು, ಸಂತರು ಹೀಗೆ ಹಲವು ಶಿಲ್ಪಗಳನ್ನು ಉಪ್ಪಿನ ಗಡ್ಡೆಗಳಲ್ಲಿ ಕಡೆದರು. ಕೆಲಸದ ನಡುವೆ ದೇವರನ್ನು ಪ್ರಾರ್ಥಿಸಲು ಪ್ರಾರ್ಥನಾ ಮಂದಿರಗಳನ್ನು ಸೃಷ್ಟಿಸಿದರು. ಕೈಯಿಂದ ಕೈಗೆ ಕೆಲಸವನ್ನು ದಾಟಿಸುತ್ತಿದ್ದ ಗಣಿಯ ಕೆಲಸಗಾರರದೇ ಒಂದು ಸಂಸ್ಕೃತಿ ಮತ್ತು ಸಮುದಾಯ ಬೆಳೆಯಿತು.

ಪೊಲೆಂಡಿನ ಬೋಕ್ನಿಯ ಎನ್ನುವ ಜಾಗದಲ್ಲಿ ವೇಲಿಜ್ಕಾ ಉಪ್ಪನ ಗಣಿಗಿಂತಲೂ ಹಳೆಯದಾದ ಮತ್ತೊಂದು ಉಪ್ಪಿನ ಗಣಿಯಿದೆ. ವೇಲಿಜ್ಕಾ ಯುನೆಸ್ಕೋ ಪಟ್ಟಿಗೆ ಸೇರಿದ್ದು 1978ರಲ್ಲಾದರೂ ಬೋಕ್ನಿಯದ ಗಣಿಗೆ 2010ರವರೆಗೂ ಈ ಮಾನ್ಯತೆ ದೊರಕಲಿಲ್ಲ. ಇದೀಗ ಯುನೆಸ್ಕೋ ಇವೆರಡೂ ಗಣಿಗಳನ್ನು ಜಂಟಿಯಾಗಿ ಗುರುತಿಸುತ್ತದೆ. 1994ರಲ್ಲಿ ವೇಲಿಜ್ಕಾ ಉಪ್ಪಿನ ಗಣಿ ಮನುಷ್ಯನ ಚರಿತ್ರೆಯನ್ನು ಹಿಡಿದಿಟ್ಟ ವಿಶೇಷ ಸ್ಥಳವೆಂದು ಪೋಲೆಂಡಿನ ಚಾರಿತ್ರಿಕ ಸ್ಥಳಗಳ ಪಟ್ಟಿಯಲ್ಲಿ ಗುರುತಿಸಲ್ಪಟ್ಟಿತು.

## ಸಾಹಿತ್ಯದಲ್ಲೂ ಉಪ್ಪಿನ ರುಚಿ

ಹಲವಾರು ಪೋಲಿಷ್ ಖ್ಯಾತನಾಮ ಬರಹಗಾರರು ವೇಲಿಜ್ಕಾ ಉಪ್ಪಿನ ಗಣಿಯನ್ನು ತಮ್ಮ ಕೃತಿಗಳಲ್ಲಿ ಸೇರಿಸಿದ್ದಾರೆ. 1878ರಲ್ಲಿ ಬೋಲೆಸ್ಲಾವ್ ಪ್ರಸ್ ಎನ್ನುವಾತ ತನ್ನ ಮೂರು ಮುಖ್ಯ ಲೇಖನಗಳಲ್ಲಿ ಒಂದನ್ನು ವೇಲಿಜ್ಕಾದ ಕುರಿತಾಗಿಯೇ ಬರೆದಿದ್ದಾನೆ. 1895ರಲ್ಲಿ ಝಿಗ್ಮೆಂಟ್ ಸ್ಟೇಯ್ಕೊಂಸ್ಕಿ 'ದಿ ಪವರ್ ಆಫ್ ಲ್ಯಾಬರಿಂತೀನ್ ಸೀನ್' ಎನ್ನುವ ಒಂದು ಕಾದಂಬರಿಯನ್ನೇ ಬರೆದಿದ್ದಾನೆ. 1995ರಲ್ಲಿ ಸಂಗೀತ ಸಂಯೋಜಕನೊಬ್ಬ ತನ್ನ ಸಂಗೀತವನ್ನು ಇಲ್ಲಿನ ಬೃಹತ್ ಚಾಪೆಲ್‌ಗಳ ಸಭಾಂಗಣದಲ್ಲಿ ಧ್ವನಿ ಮುದ್ರಿಸಿದ. ಈ ಚಾಪೆಲ್‌ಗಳಲ್ಲಿ ಇಡೀ ಯೂರೋಪಿನಲ್ಲಿಯೇ ಅತ್ಯುತ್ತಮವಾದ ಅಕೌಸ್ಟಿಕ್ಸ್ ಇದೆ ಎನ್ನಲಾಗಿದೆ. ಆಸ್ಟ್ರೇಲಿಯಾದ ದೂರದರ್ಶನ ಸರಣಿ **'Spell Binder: Land of the dragon Lord'**ನಲ್ಲಿ ಚಕ್ರವ್ಯೂಹದಂತೆ ಸಾಗುವ ಈ ಉಪ್ಪಿನ ಗಣಿಯನ್ನು ಉಪಯೋಗಿಸಿಕೊಂಡು ಚಿತ್ರೀಕರಣ ಮಾಡಲಾಗಿದೆ. ಇಲ್ಲಿನ ಒಳನದಿ 135 ಮೀಟರು ಹರಿಯುತ್ತದೆ. ಒಂದೊಮ್ಮೆ ಇದರಲ್ಲಿ ಬೋಟಿಂಗ್ ವ್ಯವಸ್ಥೆ ಮಾಡುವ ಪ್ರಯತ್ನವಾದರೂ ಅತಿ ಉಪ್ಪಿನ ನೀರಾದ ಕಾರಣ ಬೋಟುಗಳು ತುಕ್ಕುಹಿಡಿದವು.

## ನೈಸರ್ಗಿಕ ಅಚ್ಚರಿಗಳ ತಾಣವೂ ಹೌದು

ಇಷ್ಟೇ ಅಲ್ಲದೆ ಈ ಉಪ್ಪಿನ ಗಣಿಯಲ್ಲಿ ಪ್ರವಾಸಿಗರಿಗೆ ಪ್ರವೇಶವಿಲ್ಲದ ಬೆಲೆಕಟ್ಟಲಾಗದ ನೈಸರ್ಗಿಕ ಕೌತುಕಗಳೂ ಇವೆ. 19ನೇ ಶತಮಾನದಲ್ಲಿ ಈ ಗಣಿಯ ಆಳದಲ್ಲಿ ಅತಿಶ್ರೇಷ್ಠವಾದ ಹಾಲೈಟ್ ಹರಳುಗಳು ತೂಗಿಬಿದ್ದಿರುವ ಎರಡು ಗುಹೆಗಳು ಪತ್ತೆಯಾದವು. ಮೇಲಿನ ಗುಹೆ 1000 ಮೀಟರ್ ಕ್ಯೂಬ್‌ನಷ್ಟು ಇದ್ದರೆ, ಕೆಳಗಿನದು 706 ಮೀಟರ್ ಕ್ಯೂಬ್‌ನಷ್ಟು ದೊಡ್ಡದಿದೆ.

ಹಾಲೈಟ್ ಹರಳುಗಳು ಹಾಳಾಗದಿರದಂತೆ ಅದೇ ನೈಸರ್ಗಿಕ ವಾತಾವರಣದಲ್ಲಿ ಸುರಕ್ಷಿತವಾಗಿಡುವ ದೃಷ್ಟಿಯಿಂದ ಯಾರಿಗೂ ಇಲ್ಲಿಗೆ ಪ್ರವೇಶ ನೀಡುವುದಿಲ್ಲ. ಈ ಭಾಗ ಅತ್ಯಂತ ಪುರಾತನವಾಗಿದ್ದು ಕಾನೂನುರೀತಿ ಸಂರಕ್ಷಿಸಲಾಗಿದೆ.

ವೇಲಿಜ್ಕಾ ಗಣಿಯನ್ನು ನೋಡಲು ಪ್ರತಿವರ್ಷ 1.2 ಮಿಲಿಯನ್ ಜನ ಪ್ರವಾಸಿಗರು ಪ್ರಪಂಚದ ಎಲ್ಲೆಡೆಯಿಂದ ಬರುತ್ತಾರೆ. ಇದೆಲ್ಲವನ್ನು ನೋಡುತ್ತ , ಕೇಳುತ್ತ , ತಿಳಿಯುತ್ತ 3.5 ಕಿ.ಮೀ. ನಡೆದ ನಂತರ, ಸಣ್ಣ ಲಿಫ್ಟ್‌ಗಳಲ್ಲಿ ಜನರನ್ನು ಮೇಲಕ್ಕೆ ಕರೆತರುತ್ತಾರೆ. ಅಲ್ಲಿನ ಗಿಫ್ಟ್ ಶಾಪ್‌ನಲ್ಲಿ ಉಪ್ಪನ್ನು, ಚಿತ್ತಾರದ ಹರಳುಗಳ ಉಪ್ಪಿನ ಗಡ್ಡೆಗಳನ್ನು ಖರೀದಿಸಬಹುದು. ಇಷ್ಟೆಲ್ಲ ಸುತ್ತಿ ಸುಸ್ತಾಗಿದ್ದರೆ ಊಟ ಮಾಡಲು ಒಂದು ರೆಸ್ಟೋರೆಂಟ್ ಕೂಡ ಇದೆ.


ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ
ಉಚಿತ ಭವಿಷ್ಯ ಶಾಶ್ವತ ಪರಿಹಾರ ಫೋನಿನ ಮೂಲಕ ಭವಿಷ್ಯ ತಿಳಿಸುತ್ತಾರೆ
ಸ್ತ್ರೀ-ಪುರುಷ ವಶೀಕರಣ, ಇಷ್ಟಪಟ್ಟವರು ನಿಮ್ಮಂತೆ ಆಗಲು ವಿವಾಹ, ಸಂತಾನ, ಸ್ತ್ರೀಪುರುಷ ಪ್ರೇಮವಿಚಾರ, ಅತ್ತೆ-ಸೊಸೆ ಕಲಹ, ಗಂಡ-ಹೆಂಡತಿ ಕಿರಿಕಿರಿ, ಉದ್ಯೋಗ, ಶತ್ರುಕಾಟ, ಸಾಲಬಾದೆ, ಮಾಟಮಂತ್ರ, ಹಾಗೂ ಇನ್ನಿತರ ಗುಪ್ತ ಕಠಿಣ ಸಮಸ್ಯೆಗಳಿಗೆ ಕೇರಳ ಹಾಗೂ ಕೊಳ್ಳೆಗಾಲ ರುಂಡಮಾಲಿನಿ ಪೂಜಾ ಶಕ್ತಿಯಿಂದ 5 ದಿನಗಳಲ್ಲಿ ಶಾಶ್ವತ ಪರಿಹಾರ.
ನೀವು ಹಲವಾರು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಪರಿಹಾರಕ್ಕಾಗಿ ಇವರಿಗೆ ಒಮ್ಮೆ ಕರೆಮಾಡಿ.
→ ಪಂಡಿತ್. ಸುರೇಶ್ ಭಟ್ ಗುರೂಜಿ 9900305071